

ಆರಿಫ್ ರಾಜಾ

ಕವಯಿತ್ರಿ, ವಕೀಲೆ
**ಸರಿತಾ ತಿವಾರಿ**
ದೇಶ:
**ನೇಪಾಳ**

# ಚೌಕಟ್ಟುಗಳ ಮುರಿದು ಕಟ್ಟುತ್ತ



ಗಟ್ಟಿ ದನಿಯ ಸರಿತಾ ತಿವಾರಿ ಹೊಸ ತಲೆಮಾರಿನ ನೇಪಾಳಿ ಕವಯಿತ್ರಿ, ಸಾಮಾಜಿಕ ಕಾರ್ಯಕರ್ತೆ, ವಕೀಲೆ. 1979 ಎಪ್ರಿಲ್ 15ರಂದು ನೇಪಾಳದ ಪೋಖರಾದಲ್ಲಿ ಜನನ. ನೇಪಾಳಿ ಭಾಷಾ ಸಾಹಿತ್ಯದಲ್ಲಿ ಎಂ.ಎ ಪದವಿ ಪಡೆದಿರುವ ಇವರ ಮೂರು ಕೃತಿಗಳು ಪ್ರಕಟವಾಗಿವೆ. ‘ಬುದ್ಧ ರಾ ಲವಹರು’ (2000) ‘ಅಸ್ತಿತ್ವಾ ಕೋ ಘೋಷ್ಣಪತ್ರ’ (2010) ‘ಪ್ರಶ್ನಹರು ಕೋ ಕಾರ್ಖಾನ’ (2015) ಇದೇ ಕೃತಿಯನ್ನು ಹಿಂದಿಗೆ ‘ಸವಲೋಂ ಕಾ ಕಾರ್ಖಾನಾ’ ಎಂದು ಅನುವಾದಿಸಲಾಗಿದೆ. ಸರಿತಾ ತಿವಾರಿ ನೇಪಾಳದ ಜನಪ್ರಿಯ ದಿನಪತ್ರಿಕೆ ‘ಕಾಂತಿಪುರ’ದಲ್ಲಿ ಅಂಕಣ ಬರೆಯುತ್ತಾರೆ.

## ಸರಿತಾ ತಿವಾರಿ ಸಂದರ್ಶನ

◆ **ನಿಮ್ಮ ಕೌಟುಂಬಿಕ ಹಿನ್ನೆಲೆ, ಬಾಲ್ಯದ ಪರಿಸರ ಮತ್ತು ಶೈಕ್ಷಣಿಕ ಜೀವನದ ಬಗ್ಗೆ ಹಂಚಿಕೊಳ್ಳಿ**

ನೇಪಾಳದ ಪೋಖರಾ ಎಂಬ ಸುಂದರ ಊರಿನಲ್ಲಿ ನಾನು ಹುಟ್ಟಿದ್ದು. ಆದರೆ ನನ್ನ ಬಾಲ್ಯ ಅಷ್ಟೇನೂ ಚಂದದ್ದಲ್ಲ. ನಮ್ಮಪ್ಪನ ಅಕಾಲಿಕ ಮರಣದ ನಂತರ ಮೂವರು ಒಡಹುಟ್ಟಿದವರ ಜೊತೆಗೆ ನನ್ನನ್ನೂ ಅಮ್ಮ ಬೆಳೆಸಿದಳು. ಅಪ್ಪ ಉಡಾಳ ಮತ್ತು ಹೊಣೆಗೇಡಿಯಾಗಿದ್ದರಂತೆ. ಅಮ್ಮನಿಗೆ ತವರು ಮನೆಯಿಂದ ಬಳುವಳಿಯಾಗಿ ಬಂದ ತುಂಡು ಭೂಮಿಯ ಹೊರತು ನಮ್ಮ ಬಳಿ ಮತ್ತಿನ್ನೇನೂ ಇರಲಿಲ್ಲ. ಅದನ್ನವಳು ಮಾರಿ ನಮ್ಮನ್ನು ತೆರಾಯ್ ಪ್ರಾಂತ್ಯಕ್ಕೆ ಕರೆತಂದಳು. ಕಡುಕಷ್ಟದಲ್ಲಿ ನಮ್ಮನ್ನಾಕೆ ಬೆಳೆಸಿದಳು, ಸಲಹಿದಳು ಮತ್ತು ಶಿಕ್ಷಣವನ್ನೂ ಕೊಡಿಸಿದಳು. ನನ್ನಮ್ಮ ಅಸಾಧಾರಣ ಧೈರ್ಯ, ದೃಢತೆ ಮತ್ತು ಮುಂದಾಲೋಚನೆ ಇದ್ದವಳು. ಇಂದಿನ ನನ್ನ ಶೈಕ್ಷಣಿಕ ಪ್ರಗತಿ, ಜ್ಞಾನ ಮತ್ತು ಕಾವ್ಯದ ಆಸಕ್ತಿ ಅವಳ